# ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

## ಜುಲೈ ೧೮, ೨೦೨೩ರ ಮಂಗಳವಾರದಂದು ನಡೆದ ಕಾರ್ಯಕಾರಿ ಸಮಿತಿ ೨೨೦ನೇ ಸಭೆಯ ನಡವಳಿಗಳು

೦೧. ಡಾ. ಡಿ.ವಿ. ಪರಮಶಿವಮೂರ್ತಿ, ಮಾನ್ಯ ಕುಲಪತಿಗಳು, ಕವಿಹಂ : ಅಧ್ಯಕ್ಷರು
೦೨. ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು : ಸದಸ್ಯರು
೦೩. ಡಾ. ಎಫ್.ಟಿ. ಹಳ್ಳಿಕೇರಿ, ಡೀನ್, ಭಾಷಾ ನಿಕಾಯ, ಕವಿಹಂ : ಸದಸ್ಯರು
೦೪. ಡಾ. ಚಲುವರಾಜು, ಡೀನ್, ಸಮಾಜ ವಿಜ್ಞಾನಗಳ ನಿಕಾಯ, ಕವಿಹಂ : ಸದಸ್ಯರು
೦೫. ಡಾ. ಶಿವಾನಂದ ಎಸ್. ವಿರಕ್ತಮಠ, ಡೀನ್, ಲಲಿತಕಲೆಗಳ ನಿಕಾಯ, ಕವಿಹಂ : ಸದಸ್ಯರು
೦೬. ಡಾ. ಶೈಲಜ ಇಂ. ಹಿರೇಮಠ, ವಿಜ್ಞಾನಗಳ ನಿಕಾಯ, ಕವಿಹಂ : ಸದಸ್ಯರು
೦೭. ಡಾ. ದಿನೇಶ್ ಕೆ., ಹಣಕಾಸು ಅಧಿಕಾರಿಗಳು, ಕವಿಹಂ : ವಿಶೇಷ ಆಹ್ವಾನಿತರು

ಸರಕಾರದಿಂದ ನಾಮನಿರ್ದೇಶನಗೊಂಡ ೮ ಸದಸ್ಯರ ಅವಧಿಯು ಡಿಸೆಂಬರ್ ೧೦, ೨೦೨೨ಕ್ಕೆ ಪೂರ್ಣಗೊಂಡಿರುತ್ತದೆ. ಈ ೮ ಸ್ಥಾನಗಳಿಗೆ ಸರ್ಕಾರದಿಂದ ಹೊಸ ಸದಸ್ಯರ ನಾಮನಿರ್ದೇಶನ ಈವರೆಗೆ ಆಗಿಲ್ಲ. ಆದ್ದರಿಂದ ಈ ೮ ಸದಸ್ಯರ ಸ್ಥಾನಗಳು ಖಾಲಿ ಇವೆ.

೦೭. ಡಾ. ಎ. ಸುಬ್ಬಣ್ಣ ರೈ, ಕುಲಸಚಿವರು, ಕವಿಹಂ : ಪದನಿಮಿತ್ತ ಕಾರ್ಯದರ್ಶಿ

**ಸಭೆಯಲ್ಲಿ ಅನುಪಸ್ಥಿತರಿದ್ದವರು:**

೦೧. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು : ಸದಸ್ಯರು
೦೨. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಣಕಾಸು ಇಲಾಖೆ, ಬೆಂಗಳೂರು : ಸದಸ್ಯರು
೦೩. ಸರ್ಕಾರದ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು : ಸದಸ್ಯರು
೦೪. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು : ಸದಸ್ಯರು

ಆರಂಭದಲ್ಲಿ ಕುಲಸಚಿವರು ಕಾರ್ಯಕಾರಿ ಸಮಿತಿ ಸದಸ್ಯರನ್ನು ಮತ್ತು ಅಧ್ಯಕ್ಷರನ್ನು ಸಭೆಗೆ ಸ್ವಾಗತಿಸಿದರು. ನೂತನ ಡೀನ್‌ರಾಗಿ ನಿಯೋಜನೆಗೊಂಡ ಡಾ. ಶಿವಾನಂದ ಎಸ್. ವಿರಕ್ತಮಠ ಅವರನ್ನು ಹಾಗೂ ಪ್ರಾಚ್ಯವಸ್ತು ಸಂಗ್ರಹಾಲಯದ ಸದಸ್ಯರಾದ ಡಾ. ಆರ್. ಮಂಜನಾಯ್ಕ ಅವರನ್ನು ಸ್ವಾಗತಿಸಿದರು. ನಂತರ ಮಂಡಿಸಲಾದ ಕಾರ್ಯಸೂಚಿಯ ಕುರಿತು ಚರ್ಚಿಸಿ, ಕೆಳಕಂಡ ನಿರ್ಣಯಗಳನ್ನು ಕೈಗೊಳ್ಳಲಾಯಿತು.

**ವಿಷಯ** : ದಿನಾಂಕ ೦೮.೦೫.೨೦೨೩ರಂದು ನಡೆದ ಕಾರ್ಯಕಾರಿ ಸಮಿತಿಯ ೨೧೮ನೇ ಸಭೆಯ ನಡವಳಿಗಳ ಅನುಪಾಲನಾ ವರದಿಗೆ ಅನುಮೋದನೆ ನೀಡುವ ಕುರಿತು.(ಅನುಬಂಧ-೦೨)

**ನಿರ್ಣಯ** : ದಿನಾಂಕ ೦೮.೦೫.೨೦೨೩ರಂದು ನಡೆದ ಕಾರ್ಯಕಾರಿ ಸಮಿತಿಯ ೨೧೮ನೇ ಸಭೆಯ ನಡವಳಿಗಳ ಅನುಪಾಲನಾ ವರದಿಯನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

**ವಿಷಯ** : ದಿನಾಂಕ ೧೯.೦೫.೨೦೨೩ರಂದು ನಡೆದ ಕಾರ್ಯಕಾರಿ ಸಮಿತಿಯ ೨೧೯ನೇ ತುರ್ತು ಸಭೆಯ ನಡವಳಿಗಳ ಸ್ಥಿರೀಕರಣ ಹಾಗೂ ಅನುಮೋದನೆ ನೀಡುವ ಕುರಿತು. (ಅನುಬಂಧ-೦೧)

**ನಿರ್ಣಯ** : ದಿನಾಂಕ ೧೯.೦೫.೨೦೨೩ರಂದು ನಡೆದ ಕಾರ್ಯಕಾರಿ ಸಮಿತಿಯ ೨೧೯ನೇ ತುರ್ತು ಸಭೆಯ ನಡವಳಿಗಳ ಸ್ಥಿರೀಕರಣ ಕುರಿತು ಚರ್ಚಿಸಿ, ಭಾಷಾ ನಿಕಾಯದ ಡೀನರಾದ ಡಾ. ಎಫ್.ಟಿ. ಹಳ್ಳಿಕೇರಿ ಹಾಗೂ ಸಮಾಜ ವಿಜ್ಞಾನಗಳ ನಿಕಾಯದ ಡೀನರಾದ ಡಾ. ಚಲುವರಾಜು ಇವರು ದಿನಾಂಕ ೧೭.೦೭.೨೦೨೩ರ ಪತ್ರಗಳಲ್ಲಿ ಕೋರಿರುವಂತೆ ಈ ಕೆಳಗಿನ ಆಕ್ಷೇಪಣೆಗಳನ್ನು ದಾಖಲಿಸಲು ತೀರ್ಮಾನಿಸಿ ಸ್ಥಿರೀಕರಣಕ್ಕೆ ಅನುಮೋದನೆ ನೀಡಿತು.

೧. ಸರ್ಕಾರದಿಂದ ಬಂದ ಉನ್ನತ ಶಿಕ್ಷಣ ಇಲಾಖೆ ಪತ್ರ ಸಂಖ್ಯೆ ಇಡಿ ೨೮ ಕೆವಿವಿ ೨೦೧೬ ದಿ. ೧೫.೦೭.೨೦೨೨ ಅಂದಿನ ಕುಲಪತಿಗಳು ಮತ್ತು ಸಂಬಂಧಪಟ್ಟ ಇತರ ನಿವೃತ್ತ ಅಧಿಕಾರಿ ಮತ್ತು ಸಿಬ್ಬಂದಿಗಳ ವಿರುದ್ಧ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲು ಕ್ರಮವಹಿಸುವಂತೆ ಸೂಚಿಸಿದ ಪತ್ರವನ್ನು ಓದಿ ದಾಖಲಿಸುವುದು.

೨. ಸದರಿ ಪತ್ರದಲ್ಲಿ ಉಲ್ಲೇಖವಾಗಿರುವ ಎರಡು ಪತ್ರಗಳಿವೆ. ಒಂದು: ಉನ್ನತ ಶಿಕ್ಷಣ ಪರಿಷತ್ತು ದಿ. ೧೧.೦೯.೨೦೧೮ ವರದಿ ಮತ್ತು ಎರಡು: ಕನ್ನಡ ವಿಶ್ವವಿದ್ಯಾಲಯ ದಿ. ೨೮.೧೦.೨೦೧೯ರಂದು ಸರ್ಕಾರಕ್ಕೆ ಸಲ್ಲಿಸಿದ ವರದಿ ಮತ್ತು ಬಾಧಿತರ ಹೇಳಿಕೆಗಳು, ಇವರ ಹೇಳಿಕೆಗಳನ್ನು ತಿರಸ್ಕರಿಸಲು ಇರುವ ಕಾರಣಗಳು ಹಾಗೂ ಪ್ರಕ್ರಿಯೆಗೆ ಸಂಬಂಧಿಸಿದ ವಿಚಾರಣೆ ನಡೆಸಿದ ಬಗ್ಗೆ ಸಮಗ್ರ ದಾಖಲೆಗಳನ್ನು ಸಭೆಗೆ ಒದಗಿಸುವುದು.

೩. ಪತ್ರ ಒಂದು ಉನ್ನತ ಶಿಕ್ಷಣ ಪರಿಷತ್ತು ದಿ. ೧೧.೮.೨೦೧೮ರ ವರದಿ ಮಾಡಿದ ಸಮಿತಿಯ ಅಧ್ಯಕ್ಷ ಮತ್ತು ಸದಸ್ಯರ ವಿವರವನ್ನು ದಾಖಲಿಸುವುದು.

೪. ಪತ್ರ ಎರಡು ಕನ್ನಡ ವಿಶ್ವವಿದ್ಯಾಲಯ ದಿ.೨೮.೧೦.೨೦೧೯ರಂದು ಸರ್ಕಾರಕ್ಕೆ ಸಲ್ಲಿಸಿದ ವರದಿ ಮಾಡಿದ ಸಮಿತಿ ವಿವರವನ್ನು ದಾಖಲಿಸುವುದು. ಸದರಿ ವರದಿ ಅಧಿಕೃತವಾಗಿದೆಯಾ? ಕಾನೂನಿನ ಮಾನ್ಯತೆ ಇದೆಯಾ? ಇದರ ಹೊಣೆಗಾರಿಕೆ ಯಾರದು ಎಂದು ಅವರ ಹೆಸರನ್ನು ದಾಖಲಿಸುವುದು.

೫. ಕ್ರಿಮಿನಲ್ ಕೇಸ್ ದಾಖಲಿಸುವ ಅಧಿಕಾರಿಗಳ ವಿವರವನ್ನು ಕುಲಸಚಿವರು ದೃಢೀಕರಿಸಿ ದಾಖಲಿಸುವುದು.

ದಿನಾಂಕ ೨೮.೧೦.೨೦೧೯ರಂದು ಕನ್ನಡ ವಿಶ್ವವಿದ್ಯಾಲಯದಿಂದ ಸಲ್ಲಿಕೆಯಾಗಿರುವ ವರದಿ ಮತ್ತು ಸರ್ಕಾರದ ಪತ್ರ ಹಾಗೂ ಬಾಧಿತರ ಮನವಿಗಳಲ್ಲಿನ ಅಂಶಗಳನ್ನು ಗಮನಿಸಿದಾಗ ಕುಲಸಚಿವರು ಕಾರ್ಯಕಾರಿ ಸಮಿತಿಗೆ ಅಗತ್ಯ ವಿವರಗಳನ್ನು ಅಧಿಕೃತವಾಗಿ ಒದಗಿಸಿಲ್ಲದಿರುವುದರಿಂದ ಈ ದೂರು ದಾಖಲಿಸುವ ಬಗೆಗೆ ಮನದಟ್ಟು ಆಗಿಲ್ಲ. ಆದ್ದರಿಂದ ಈ ವರದಿಯನ್ನು ಅನುಮೋದಿಸಿರುವ ಅಂದಿನ ಕುಲಪತಿಗಳು, ಕುಲಸಚಿವರು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರೇ ಹೊಣೆಗಾರರಾಗಿರುತ್ತಾರೆ.

**ವಿಷಯ** : ದಿನಾಂಕ ೧೯.೦೫.೨೦೨೩ರಂದು ನಡೆದ ಕಾರ್ಯಕಾರಿ ಸಮಿತಿಯ ೨೧೯ನೇ ತುರ್ತು ಸಭೆಯ ನಡೆವಳಿಗಳ ಅನುಪಾಲನಾ ವರದಿಗೆ ಅನುಮೋದನೆ ನೀಡುವ ಕುರಿತು.(ಅನುಬಂಧ-೦೨)

**ನಿರ್ಣಯ** : ದಿನಾಂಕ ೧೯.೦೫.೨೦೨೩ರಂದು ನಡೆದ ಕಾರ್ಯಕಾರಿ ಸಮಿತಿಯ ೨೧೯ನೇ ತುರ್ತು ಸಭೆಯ ನಡೆವಳಿಗಳ ಅನುಪಾಲನಾ ವರದಿಯನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

**೨೨೦.೦೧** ದಿನಾಂಕ ೧೫.೦೬.೨೦೨೩ರಂದು ನಡೆದ ಡೀನ್ ಸಮಿತಿ ಸಭೆಯ ನಡೆವಳಿ ಕುರಿತು.

**ಟಿಪ್ಪಣಿ** : ದಿನಾಂಕ ೧೫.೦೬.೨೦೨೩ರಂದು ನಡೆದ ಡೀನ್ ಸಮಿತಿ ಸಭೆಯ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

**ನಿರ್ಣಯ** : ದಿನಾಂಕ ೧೫.೦೬.೨೦೨೩ರಂದು ನಡೆದ ಡೀನ್ ಸಮಿತಿ ಸಭೆಯ ನಡೆವಳಿಗಳನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

**೨೨೦.೦೨** ದಿನಾಂಕ ೦೪.೦೭.೨೦೨೩ರಂದು ನಡೆದ ಡೀನ್ ಸಮಿತಿ ಸಭೆಯ ನಡೆವಳಿ ಕುರಿತು.

**ಟಿಪ್ಪಣಿ** : ದಿನಾಂಕ ೦೪.೦೭.೨೦೨೩ರಂದು ನಡೆದ ಡೀನ್ ಸಮಿತಿ ಸಭೆಯ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

**ನಿರ್ಣಯ** : ದಿನಾಂಕ ೦೪.೦೭.೨೦೨೩ರಂದು ನಡೆದ ಡೀನ್ ಸಮಿತಿ ಸಭೆಯ ನಡೆವಳಿಗಳನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

**೨೨೦.೦೩** ದಿನಾಂಕ ೨೬.೦೫.೨೦೨೩ರಂದು ನಡೆದ ೨೦೨೨-೨೩ನೇ ಸಾಲಿನ ಮೂರನೇ ಮತ್ತು ನಾಲ್ಕನೇ ತ್ರೈಮಾಸಿಕ ಅವಧಿಯ ಹಣಕಾಸು ಸಲಹಾ ಸಮಿತಿ ಸಭೆ ನಡೆವಳಿ ಕುರಿತು.

**ಟಿಪ್ಪಣಿ** : ದಿನಾಂಕ ೨೬.೦೫.೨೦೨೩ರಂದು ಕನ್ನಡ ವಿಶ್ವವಿದ್ಯಾಲಯದ ಪ್ರಾದೇಶಿಕ ಕಚೇರಿ, ಬೆಂಗಳೂರಿನಲ್ಲಿ ನಡೆದ ೨೦೨೨-೨೩ನೇ ಸಾಲಿನ ಮೂರನೇ ಮತ್ತು ನಾಲ್ಕನೇ ತ್ರೈಮಾಸಿಕ ಅವಧಿಯ ಹಣಕಾಸು ಸಲಹಾ ಸಮಿತಿ ಸಭೆ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿಯ ಅನುಮೋದನೆ ಕೋರಿದೆ.

**ನಿರ್ಣಯ** : ದಿನಾಂಕ ೨೬.೦೫.೨೦೨೩ರಂದು ಕನ್ನಡ ವಿಶ್ವವಿದ್ಯಾಲಯದ ಪ್ರಾದೇಶಿಕ ಕಚೇರಿ, ಬೆಂಗಳೂರಿನಲ್ಲಿ ನಡೆದ ೨೦೨೨-೨೩ನೇ ಸಾಲಿನ ಮೂರನೇ ಮತ್ತು ನಾಲ್ಕನೇ ತ್ರೈಮಾಸಿಕ ಅವಧಿಯ ಹಣಕಾಸು ಸಲಹಾ ಸಮಿತಿ ಸಭೆ ನಡೆವಳಿಯನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

**೨೨೦.೦೪** ಎಂ.ಎ. ಪಿಎಚ್.ಡಿ. ಸಂಯೋಜಿತ ಪದವಿ (ಕನ್ನಡ ಸಾಹಿತ್ಯ) ಕೋರ್ಸ್‌ನ್ನು **ಎಂ.ಎ. ಕನ್ನಡ** ಎಂಬುದಾಗಿ ಮುಂದುವರೆಸುವ ಕುರಿತು.

**ಟಿಪ್ಪಣಿ** : ಕನ್ನಡ ವಿಶ್ವವಿದ್ಯಾಲಯದ ವಿದ್ಯಾರಣ್ಯ ಆವರಣದಲ್ಲಿ ಅಧ್ಯಯನಾಂಗದ ವತಿಯಿಂದ ನಡೆಯುತ್ತಿರುವ ಎಂ.ಎ. ಪಿಎಚ್.ಡಿ. ಸಂಯೋಜಿತ ಪದವಿ (ಕನ್ನಡ ಸಾಹಿತ್ಯ) ಕೋರ್ಸ್‌ನ್ನು **ಎಂ.ಎ. ಕನ್ನಡ** ಎಂಬುದಾಗಿ ಮುಂದುವರೆಸುವ ಬಗ್ಗೆ ಕಾರ್ಯಕಾರಿ ಸಮಿತಿಯ ಅನುಮೋದನೆ ಕೋರಿದೆ.

**ನಿರ್ಣಯ** : ಸದರಿ ವಿಷಯವನ್ನು ಸಭೆಯು ಪರಿಶೀಲಿಸಿ ಎಂ.ಎ. ಪಿಎಚ್.ಡಿ. ಸಂಯೋಜಿತ ಪದವಿ (ಕನ್ನಡ ಸಾಹಿತ್ಯ) ಕೋರ್ಸ್‌ನ್ನು **ಎಂ.ಎ. ಕನ್ನಡ** ಎಂಬುದಾಗಿ ಮುಂದುವರೆಸಲು ಸರ್ವಾನುಮತದಿಂದ ಅನುಮೋದನೆ ನೀಡಿತು. ಮುಂದಿನ ಹಂತದಲ್ಲಿ ಎಂ.ಎ. ಕನ್ನಡ ಕೋರ್ಸ್‌ಗೆ ಸಂಬಂಧಪಟ್ಟಂತೆ ಪ್ರತ್ಯೇಕ ಅನುಶಾಸನವನ್ನು ರಚಿಸಿ ಸರ್ಕಾರದ ಅನುಮೋದನೆಗಾಗಿ ಸಲ್ಲಿಸಲು ತೀರ್ಮಾನಿಸಲಾಯಿತು.



21/7/23

**೨೨೦.೦೫** ಕನ್ನಡ ವಿಶ್ವವಿದ್ಯಾಲಯದ ಮಾನ್ಯತಾ ಕೇಂದ್ರಗಳಲ್ಲಿ **"ಪ್ರಾಚೀನ ಇತಿಹಾಸ ಮತ್ತು ಪುರಾತತ್ವ"** ವಿಷಯದ ಕುರಿತು ಪಿಎಚ್.ಡಿ. ಅಧ್ಯಯನಕ್ಕೆ ಅವಕಾಶ ಕಲ್ಪಿಸಿ ಮಾನ್ಯತೆ ನೀಡುವ ಕುರಿತು.

ಟಿಪ್ಪಣಿ : ಕನ್ನಡ ವಿಶ್ವವಿದ್ಯಾಲಯದಲ್ಲಿರುವ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗವು ಪ್ರಸ್ತುತ ವಿಷಯಗಳ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವುದರಿಂದ ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದಿರುವ ಹಾಗೂ ಪಡೆಯುತ್ತಿರುವ ಕೇಂದ್ರಗಳಲ್ಲಿ ಪಿಎಚ್.ಡಿ. ಅಧ್ಯಯನ ಕೈಗೊಂಡಿರುವ ಮತ್ತು ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ರೀತಿಯಲ್ಲಿ **"ಪ್ರಾಚೀನ ಇತಿಹಾಸ ಮತ್ತು ಪುರಾತತ್ವ"** ವಿಷಯದ ಕುರಿತು ಪಿಎಚ್.ಡಿ. ಅಧ್ಯಯನಕ್ಕೆ ಅವಕಾಶ ಕಲ್ಪಿಸಿ ಮಾನ್ಯತೆ ನೀಡುವ ಬಗ್ಗೆ ಕಾರ್ಯಕಾರಿ ಸಮಿತಿಯ ಅನುಮೋದನೆ ಕೋರಿದೆ.

ನಿರ್ಣಯ : ೧. ಸದರಿ ವಿಷಯವನ್ನು ಸಭೆಯು ಪರಿಶೀಲಿಸಿ ಕನ್ನಡ ವಿಶ್ವವಿದ್ಯಾಲಯದ ಮಾನ್ಯತಾ ಕೇಂದ್ರಗಳಲ್ಲಿ ೨೦೨೩-೨೪ನೇ ಶೈಕ್ಷಣಿಕ ವರ್ಷದಿಂದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಷಯದಲ್ಲಿ ಪಿಎಚ್.ಡಿ. ಅಧ್ಯಯನ ಕೈಗೊಳ್ಳಲು ಅವಕಾಶ ಕಲ್ಪಿಸುವುದೆಂದು ತೀರ್ಮಾನಿಸಲಾಯಿತು.

೨. ೨೦೨೨-೨೩ನೇ ಸಾಲಿನಲ್ಲಿ ವಿವಿಧ ಮಾನ್ಯತಾ ಕೇಂದ್ರಗಳ ಮೂಲಕ ಚರಿತ್ರೆ ವಿಷಯಕ್ಕೆ ಸಂಬಂಧಪಟ್ಟಂತೆ ಪಿಎಚ್.ಡಿ.ಗಾಗಿ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳಲ್ಲಿ ಯಾರಾದರೂ **ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ** ವಿಷಯದಲ್ಲಿ ಪಿಎಚ್.ಡಿ. ಅಧ್ಯಯನ ಕೈಗೊಳ್ಳಲು ಅಪೇಕ್ಷೆಪಟ್ಟಲ್ಲಿ ಅಂತಹ ಅಭ್ಯರ್ಥಿಗಳಿಗೂ ಅವಕಾಶ ಕಲ್ಪಿಸಬಹುದೆಂದು ತೀರ್ಮಾನಿಸಲಾಯಿತು.

**೨೨೦.೦೬** ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯಿಂದ ದೂರು ದಾಖಲಿಸುವ ಸಂಬಂಧ ಜಾರಿಯಾಗಿರುವ ಪತ್ರದ ಕುರಿತು.

ಟಿಪ್ಪಣಿ : ಕನ್ನಡ ವಿಶ್ವವಿದ್ಯಾಲಯಕ್ಕೆ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯಿಂದ ದೂರು ದಾಖಲಿಸಲು ಸಂಬಂಧಪಟ್ಟಂತೆ (ಪತ್ರ ಸಂಖ್ಯೆ: ಇ-ಕಛೇರಿ ಸಂಖ್ಯೆ: ಇಡಿ ೩೪ ಕೆವಿವಿ ೨೦೨೨ ದಿನಾಂಕ ೦೬.೦೭.೨೦೨೩) ಜಾರಿಯಾಗಿರುವ ಪತ್ರದ ಕುರಿತು ಚರ್ಚಿಸಿ ಸೂಕ್ತ ತೀರ್ಮಾನ ಕೈಗೊಳ್ಳಲು ಕಾರ್ಯಕಾರಿ ಸಮಿತಿಯ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ವಿಷಯದ ಕುರಿತು ಸಭೆಯು ಸುದೀರ್ಘವಾಗಿ ಚರ್ಚಿಸಿ ಮೇಲಿನ ಪತ್ರದಲ್ಲಿ ಉಲ್ಲೇಖಿಸಿರುವಂತೆ ಸಂಬಂಧಪಟ್ಟ ನಿವೃತ್ತರಾದ/ಸೇವೆಯಲ್ಲಿರುವ ಅಧಿಕಾರಿ/ಸಿಬ್ಬಂದಿಗಳ ಮೇಲೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲು ನಿರ್ಣಯಿಸಿತು.

**೨೨೦.೦೭** ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯಿಂದ ಬೋಧನಾ ಸಿಬ್ಬಂದಿ ನೇಮಕಾತಿ, ಪದೋನ್ನತಿ ಹಾಗೂ ವೇತನ ನಿಗದಿಯ ವಿಷಯಾಧಾರಿತ ಲೆಕ್ಕಪರಿಶೋಧನಾ ಕಂಡಿಕೆ ೪.೧./೨೦೧೬-೧೭ರ ಕುರಿತು ವಿಶ್ವವಿದ್ಯಾಲಯಕ್ಕೆ ಸಲ್ಲಿಕೆಯಾಗಿರುವ ಪತ್ರದ ಕುರಿತು.

ಟಿಪ್ಪಣಿ : ೨೦೧೬-೧೭ನೇ ಸಾಲಿನ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರ (ಸಾಮಾನ್ಯ ಮತ್ತು ಸಾಮಾಜಿಕ ವಲಯ) ವರದಿಯಲ್ಲಿನ ಬೋಧನಾ ಸಿಬ್ಬಂದಿ ನೇಮಕಾತಿ, ಪದೋನ್ನತಿ ಹಾಗೂ ವೇತನ ನಿಗದಿಯ ವಿಷಯಾಧಾರಿತ ಲೆಕ್ಕಪರಿಶೋಧನಾ ಕಂಡಿಕೆ ೪.೧/೨೦೧೬-೧೭ರ ವಿಷಯಕ್ಕೆ ಸಂಬಂಧ ಪಟ್ಟಂತೆ ಕನ್ನಡ ವಿಶ್ವವಿದ್ಯಾಲಯಕ್ಕೆ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯಿಂದ ಪತ್ರ ಕ್ರಮಾಂಕ: ಇಡಿ ೩೯೭ ಯುಆರ್‌ಸಿ ೨೦೨೨, ದಿನಾಂಕ ೧೧.೦೬.೨೦೨೩ರ ಮೂಲಕ ಸಲ್ಲಿಕೆಯಾಗಿರುವ ಪತ್ರದ ಕುರಿತು ಚರ್ಚಿಸಿ ಸೂಕ್ತ ತೀರ್ಮಾನ ಕೈಗೊಳ್ಳಲು ಕಾರ್ಯಕಾರಿ ಸಮಿತಿಯ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ಪತ್ರದಲ್ಲಿ ಉಲ್ಲೇಖಿಸಿರುವಂತೆ ಮುಂದಿನ ಕ್ರಮಕ್ಕಾಗಿ ಕನ್ನಡ ವಿಶ್ವವಿದ್ಯಾಲಯದಲ್ಲಿ ರಾಜ್ಯ ವೇತನ ಶ್ರೇಣಿಯ ವೃಂದದ ೭ ಜನ ಯೋಜನಾ ಸಹಾಯಕರು/ಪ್ರಕಟಣಾ ಸಹಾಯಕರನ್ನು ಯುಜಿಸಿ ವೇತನ ಶ್ರೇಣಿಯ ಪ್ರಾಧ್ಯಾಪಕ ಹುದ್ದೆಗಳಿಗೆ ಉನ್ನತೀಕರಿಸಿರುವ ಪರಿನಿಯಮಕ್ಕೆ ಅನುಮೋದನೆ ನೀಡಿರುವ ಕುರಿತಂತೆ ಲೆಕ್ಕಪರಿಶೋಧನಾ ಕಂಡಿಕೆ ೪.೧/೨೦೧೬-೧೭ರ ವಿಷಯದ ಕುರಿತು ಸರ್ಕಾರದಿಂದ ಸಲ್ಲಿಕೆಯಾಗಿರುವ ಪತ್ರಕ್ಕೆ ಅಂದಿನ ಮಾನ್ಯ ಕುಲಪತಿಗಳು, ಕುಲಸಚಿವರು, ಹಣಕಾಸು ಅಧಿಕಾರಿಗಳು/ಸಿಬ್ಬಂದಿಗಳಿಂದ ಅಭಿಪ್ರಾಯವನ್ನು ಪಡೆಯಲು ಸಭೆಯು ತೀರ್ಮಾನಿಸಿತು.

**೨೨೦.೦೮** ವೇತನ ವಿಭಾಗದ ಹಿರಿಯ ಸಹಾಯಕರಾದ ಶ್ರೀ ಹನುಮಪ್ಪ ಮಗಡರ ಅವರಿಂದ ಆಗಿರುವ ಕರ್ತವ್ಯ ಲೋಪದ ಬಗ್ಗೆ ಸದರಿಯವರಿಗೆ ನೀಡಲಾಗಿದ್ದ ವಿವರಣೆ ಕೇಳಿ ನೋಟೀಸಿಗೆ ಶ್ರೀಯುತರು ನೀಡಿರುವ ವಿವರಣೆ ಪತ್ರಗಳ ಕುರಿತು.

ನಿರ್ಣಯ : ಈ ಕುರಿತು ಚರ್ಚಿಸಿದ ಸಭೆಯು ಸದರಿ ಸಿಬ್ಬಂದಿಗೆ ನೋಟೀಸ್‌ನ್ನು ಜಾರಿ ಮಾಡಿ, ಮೂರು ದಿನಗಳ ಒಳಗಾಗಿ ಪ್ರಸ್ತುತ ಪ್ರಕರಣಕ್ಕೆ ಸಂಬಂಧಪಟ್ಟಂತೆ ಲಿಖಿತ ರೂಪದಲ್ಲಿ ಕ್ಷಮಾಪಣೆಯನ್ನು ಕೋರುವಂತೆಯೂ ತಪ್ಪಿದಲ್ಲಿ ನಿಯಮಾನುಸಾರ ಅಮಾನತ್ತುಗೊಳಿಸಲಾಗುವುದೆಂದೂ ಸೂಚಿಸಬೇಕೆಂದು ಸಭೆ ತೀರ್ಮಾನಿಸಿತು.

**೨೨೦.೦೯** ಕನ್ನಡ ವಿಶ್ವವಿದ್ಯಾಲಯದ ಹಳೆವಿದ್ಯಾರ್ಥಿಗಳ ಸಂಘ(ಅಲ್ಯೂಮಿನಿ ಅಸೋಶಿಯೇಷನ್)ಗೆ ವಿದ್ಯಾರ್ಥಿಗಳಿಂದ ಶುಲ್ಕ ಸಂಗ್ರಹಿಸುವ ಕುರಿತು.

ಟಿಪ್ಪಣಿ : ಕನ್ನಡ ವಿಶ್ವವಿದ್ಯಾಲಯದ ಹಳೆವಿದ್ಯಾರ್ಥಿಗಳ ಸಂಘದ ಸದಸ್ಯತ್ವಕ್ಕಾಗಿ ಪಿಎಚ್.ಡಿ. ವಿದ್ಯಾರ್ಥಿಗಳಿಂದ ಮಹಾಪ್ರಬಂಧ ಸಲ್ಲಿಕೆಯ ಸಂದರ್ಭದಲ್ಲೂ, ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಂದ ಪರೀಕ್ಷಾ ಶುಲ್ಕ ಪಾವತಿಯ

ಸಂದರ್ಭದಲ್ಲೂ ನಿರ್ದಿಷ್ಟ ಮೊತ್ತದ ಸದಸ್ಯತ್ವ ಶುಲ್ಕವನ್ನು ಪಾವತಿಸಿಕೊಳ್ಳಲು ಕಾರ್ಯಕಾರಿ ಸಮಿತಿಯ ಅನುಮೋದನೆ ಕೋರಿದೆ.

**ನಿರ್ಣಯ** : ಸದರಿ ವಿಷಯದ ಕುರಿತು ಸಭೆಯು ಸುದೀರ್ಘವಾಗಿ ಚರ್ಚಿಸಿ ಈ ಕೆಳಗಿನಂತೆ ಹಳೆ ವಿದ್ಯಾರ್ಥಿಗಳ ಸಂಘದ ಸದಸ್ಯತ್ವಕ್ಕಾಗಿ ಶುಲ್ಕವನ್ನು ನಿಗದಿಗೊಳಿಸಲು ತೀರ್ಮಾನಿಸಿತು.

| | | |
|---|---|---|
| ೧. ಸರ್ಟಿಫಿಕೇಟ್ ಡಿಪ್ಲೊಮಾ ಕೋರ್ಸ್ ವಿದ್ಯಾರ್ಥಿಗಳಿಗೆ | ರೂ. ೫೦೦/- | (ಪರೀಕ್ಷಾ ಶುಲ್ಕ ಪಾವತಿ ಸಂದರ್ಭದಲ್ಲಿ) |
| ೨. ಸ್ನಾತಕ ಪದವಿ ವಿದ್ಯಾರ್ಥಿಗಳಿಗೆ | ರೂ. ೫೦೦/- | (ಪರೀಕ್ಷಾ ಶುಲ್ಕ ಪಾವತಿ ಸಂದರ್ಭದಲ್ಲಿ) |
| ೩. ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ | ರೂ. ೮೦೦/- | (ಪರೀಕ್ಷಾ ಶುಲ್ಕ ಪಾವತಿ ಸಂದರ್ಭದಲ್ಲಿ) |
| ೪. ಪಿಎಚ್.ಡಿ. ಹಾಗೂ ಪಿ.ಡಿ.ಎಫ್. ವಿದ್ಯಾರ್ಥಿಗಳಿಗೆ | ರೂ. ೧೦೦೦/- | (ಮಹಾಪ್ರಬಂಧ ಸಲ್ಲಿಕೆ ಸಂದರ್ಭದಲ್ಲಿ) |
| ೫. ಡಿ.ಲಿಟ್. ವಿದ್ಯಾರ್ಥಿಗಳಿಗೆ | ರೂ. ೨೦೦೦/- | (ಮಹಾಪ್ರಬಂಧ ಸಲ್ಲಿಕೆ ಸಂದರ್ಭದಲ್ಲಿ) |

**ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು**

**೨೨೦.೧೦** ಕನ್ನಡ ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿರುವ ಬೋಧಕ ಮತ್ತು ಬೋಧಕೇತರ ಮಹಿಳಾ ಸಿಬ್ಬಂದಿಗಳಿಗೆ ಶಿಶುಪಾಲನಾ ರಜೆಯನ್ನು ಮಂಜೂರು ಮಾಡಲು ಘಟನೋತ್ತರ ಅನುಮೋದನೆ ಕುರಿತು.

ಟಿಪ್ಪಣಿ : ಕರ್ನಾಟಕ ರಾಜ್ಯ ಸರ್ಕಾರಿ ಮಹಿಳಾ ನೌಕರರಿಗೆ ಇಡೀ ಸೇವಾ ಅವಧಿಯಲ್ಲಿ ಗರಿಷ್ಠ ಆರು ತಿಂಗಳವರೆಗೆ ಅಂದರೆ ೧೮೦ ದಿನಗಳ ಶಿಶುಪಾಲನಾ ರಜೆಯನ್ನು ಮಂಜೂರು ಮಾಡುವ ಸಕ್ಷಮ ಪ್ರಾಧಿಕಾರವು ಮಂಜೂರು ಮಾಡತಕ್ಕದ್ದು ಎಂಬ ಕರ್ನಾಟಕ ಸರ್ಕಾರದ ನಡಾವಳಿಗಳನ್ವಯ ಕನ್ನಡ ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿರುವ ಈ ಕೆಳಕಂಡ ಬೋಧಕ ಮತ್ತು ಬೋಧಕೇತರ ಮಹಿಳಾ ಸಿಬ್ಬಂದಿಗಳಿಗೆ ಶಿಶುಪಾಲನಾ ರಜೆಯನ್ನು ಸಂಬಂಧಿಸಿದ ವಿಭಾಗದ ಮುಖ್ಯಸ್ಥರ ಶಿಫಾರಸ್ಸಿನಂತೆ ಆಡಳಿತಾತ್ಮಕವಾಗಿ ಮಂಜೂರು ಮಾಡಲಾಗಿದೆ. ಸದರಿ ಆದೇಶಕ್ಕೆ ಕಾರ್ಯಕಾರಿ ಸಮಿತಿಯ ಘಟನೋತ್ತರ ಅನುಮೋದನೆ ಕೋರಿದೆ.

| | | |
|---|---|---|
| ೧. ಡಾ. ಕೆ. ಗೀತಮ್ಮ, ಸಹಾಯಕ ಪ್ರಾಧ್ಯಾಪಕರು | ದಿ: ೨೭.೩.೨೦೨೩ ರಿಂದ ೧೦.೪.೨೦೨೩ | ಒಟ್ಟು ೧೫ ದಿನಗಳು |
| ೨. ಶ್ರೀಮತಿ ಡಿ. ಪ್ರಭಾ, ಸಹಾಯಕ ನಿರ್ದೇಶಕರು | ದಿ: ೬.೯.೨೦೨೧ ರಿಂದ ೨೦.೯.೨೦೨೧ | ಒಟ್ಟು ೧೫ ದಿನಗಳು |
| ೩. ಶ್ರೀಮತಿ ಡಿ. ಪ್ರಭಾ, ಸಹಾಯಕ ನಿರ್ದೇಶಕರು | ದಿ: ೧.೬.೨೦೨೩ ರಿಂದ ೩೧.೭.೨೦೨೩ರವರೆಗೆ | ಒಟ್ಟು ೬೧ ದಿನಗಳು |
| ೪. ಶ್ರೀಮತಿ ಕೆ. ಸುಮಂಗಲಾ, ಕಿರಿಯ ಸಹಾಯಕರು | ದಿ: ೫.೬.೨೦೨೩ ರಿಂದ ೧೯.೬.೨೦೨೩ರವರೆಗೆ | ಒಟ್ಟು ೧೫ ದಿನಗಳು |
| ೫. ಶ್ರೀಮತಿ ಕೆ.ಎಂ. ಪಾರ್ವತಮ್ಮ, ಅಧೀಕ್ಷಕರು | ದಿ: ೨.೬.೨೦೨೩ ರಿಂದ ೧೬.೬.೨೦೨೩ರವರೆಗೆ | ಒಟ್ಟು ೧೫ ದಿನಗಳು |

**ನಿರ್ಣಯ** : ಸದರಿ ವಿಷಯವನ್ನು ಪರಿಶೀಲಿಸಿದ ಸಭೆಯು ಕನ್ನಡ ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿರುವ ಬೋಧಕ ಮತ್ತು ಬೋಧಕೇತರ ಮಹಿಳಾ ಸಿಬ್ಬಂದಿಗಳಿಗೆ ಶಿಶುಪಾಲನಾ ರಜೆಯನ್ನು ಮಂಜೂರು ಮಾಡಿದ ಕ್ರಮಕ್ಕೆ ಘಟನೋತ್ತರ ಅನುಮೋದನೆ ನೀಡಿತು. ಸದರಿ ಸೌಲಭ್ಯವನ್ನು ಇನ್ನು ಮುಂದೆ ಸದರಿ ರಜೆಗೆ ಅರ್ಜಿ ಸಲ್ಲಿಸುವ ಮಹಿಳಾ ನೌಕರರಿಗೂ ಅನ್ವಯಿಸುವುದೆಂದು ಸಭೆಯು ತೀರ್ಮಾನಿಸಿತು.

**೨೨೦.೧೧** ಸಿ.ಎ.ಎಸ್. ಮುಂಬಡ್ತಿ ಕುರಿತು.

ಟಿಪ್ಪಣಿ : ಪ್ರಾಧ್ಯಾಪಕರಿಂದ ಹಿರಿಯ ಪ್ರಾಧ್ಯಾಪಕರ ಹಾಗೂ ಸಹ ಪ್ರಾಧ್ಯಾಪಕರು, ಸಹಾಯಕ ಪ್ರಾಧ್ಯಾಪಕರು, ಉಪಗ್ರಂಥಪಾಲಕರು, ಸಹಾಯಕ ಗ್ರಂಥಪಾಲಕರ ಮುಂದಿನ ಹಂತಕ್ಕೆ ಬಡ್ತಿ ಹೊಂದಲು ಸಿ.ಎ.ಎಸ್. ಮುಂಬಡ್ತಿಗಾಗಿ ಅರ್ಜಿ ಕರೆಯಬೇಕೆಂದು ಮನವಿಗಳನ್ನು ಸಲ್ಲಿಸಿರುವ ಹಿನ್ನೆಲೆಯಲ್ಲಿ ಸಿ.ಎ.ಎಸ್. ಮುಂಬಡ್ತಿ ಪ್ರಕ್ರಿಯೆಗೆ ಕ್ರಮವಹಿಸಲು ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

**ನಿರ್ಣಯ** : ಸಿ.ಎ.ಎಸ್. ಮುಂಬಡ್ತಿ ಪ್ರಕ್ರಿಯೆಗೆ ಕ್ರಮವಹಿಸಲು ಸಭೆಯು ಅನುಮೋದನೆ ನೀಡಿತು.

**೨೨೦.೧೨** ಸಮಾಜಶಾಸ್ತ್ರ, ಸಮೂಹ ಸಂವಹನ ಹಾಗೂ ಯೋಗ ಅಧ್ಯಯನ ಈ ೩-ವಿಭಾಗಗಳು ಮತ್ತು ೭-ಸ್ನಾತಕೋತ್ತರ ಪದವಿ, ೧೨-ಸ್ನಾತಕೋತ್ತರ ಡಿಪ್ಲೊಮಾ, ೧-ಡಿಪ್ಲೊಮಾ ಕೋರ್ಸ್, ಹಾಗೂ ೧-ಸರ್ಟಿಫಿಕೇಟ್ ಕೋರ್ಸ್‌ಗಳ ಅನುಶಾಸನ ಕುರಿತು.

ಟಿಪ್ಪಣಿ : ಕರ್ನಾಟಕ ಸರ್ಕಾರ, ಉನ್ನತ ಶಿಕ್ಷಣ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳ ಪತ್ರ ದಿನಾಂಕ ೬.೩.೨೦೨೩ ಮತ್ತು ದಿನಾಂಕ ೧೭.೪.೨೦೨೩ರ ಪತ್ರಗಳಲ್ಲಿ ಸೂಚಿಸಿದಂತೆ ಕನ್ನಡ ವಿಶ್ವವಿದ್ಯಾಲಯದಲ್ಲಿ ಪ್ರಾರಂಭಿಸಲು ಉದ್ದೇಶಿಸಲಾಗಿರುವ **೦೩ ಅಧ್ಯಯನ ವಿಭಾಗಗಳು** (೧. ಸಮಾಜಶಾಸ್ತ್ರ, ೨. ಸಮೂಹ ಸಂವಹನ, ೩. ಯೋಗ ಅಧ್ಯಯನ) **೦೭ ಸ್ನಾತಕೋತ್ತರ ಪದವಿ** (೧. ಇತಿಹಾಸ ಮತ್ತು ಪುರಾತತ್ವ, ೨. ಸಮಾಜಶಾಸ್ತ್ರ, ೩. ಗ್ರಾಮೀಣಾಭಿವೃದ್ಧಿ, ೪. ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ, ೫. ಪ್ರದರ್ಶಕ ಕಲೆ-ಸಂಗೀತ (ಕರ್ನಾಟಕ ಸಂಗೀತ), ೬. ಪ್ರದರ್ಶಕ ಕಲೆ-ನೃತ್ಯ (ಭರತನಾಟ್ಯ), ೭. ಯೋಗ ವಿಜ್ಞಾನ) **೧೨ ಸ್ನಾತಕೋತ್ತರ ಡಿಪ್ಲೊಮಾಗಳು** (೧. ಕನ್ನಡ ಭಾಷಾಧ್ಯಯನ, ೨. ದ್ರಾವಿಡ ಭಾಷಾವಿಜ್ಞಾನ, ೩. ಹಸ್ತಪ್ರತಿಶಾಸ್ತ್ರ, ೪. ಭಾಷಾಂತರ ಅಧ್ಯಯನ, ೫. ಜಾನಪದ ಅಧ್ಯಯನ, ೬. ಬುಡಕಟ್ಟು ಅಧ್ಯಯನ, ೭. ಮಾನವಶಾಸ್ತ್ರ, ೮. ಶಾಸನಶಾಸ್ತ್ರ,

೯. ಪತ್ರಿಕೋದ್ಯಮ, ೧೦. ಪಂಚಾಯತ್ ರಾಜ್, ೧೧. ಯೋಗ ಅಧ್ಯಯನ, ೧೨. ಪುರಾತತ್ವ ವಸ್ತುಸಂಗ್ರಹಾಲಯಶಾಸ್ತ್ರ ಮತ್ತು ಪ್ರವಾಸೋದ್ಯಮ) ಮತ್ತು **ಒಂದು ನಾಟಕ ಕಲೆ ಡಿಪ್ಲೊಮಾ** ಹಾಗೂ **ಒಂದು ಯೋಗ ಅಧ್ಯಯನ ಸರ್ಟಿಫಿಕೇಟ್ ಕೋರ್ಸ್‌ಗಳ** ಅನುಶಾಸನಗಳ ಅನುಮೋದನೆಗೆ ಸಂಬಂಧಿಸಿದ ಲೋಪಗಳನ್ನು ಅನುಶಾಸನ ಪರಿಶೀಲನಾ ಸಮಿತಿ ಸಭೆಯು ಸರಿಪಡಿಸಿದೆ. ಈ ಅನುಶಾಸನಗಳನ್ನು ನಿಗದಿತ ನಮೂನೆಯಲ್ಲಿ ಸರಕಾರಕ್ಕೆ ಸಲ್ಲಿಸಬೇಕಾಗುತ್ತದೆ. ಈ ಪ್ರಕ್ರಿಯೆಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಮೇಲೆ ಸೂಚಿಸಲಾದ ಕೋರ್ಸ್‌ಗಳ ಅನುಶಾಸನಗಳಿಗೆ ಸಭೆಯು ಅನುಮೋದನೆ ನೀಡಿತು.

೨೨೦.೧೩ ದಿನಾಂಕ ೨೭.೦೬.೨೦೨೩ರಂದು ನಡೆದ ಚಿತ್ರಕಲಾ ವಿದ್ಯಾಲಯಗಳ ನಿರ್ವಹಣಾ ಕೇಂದ್ರದ ಬಿ.ವಿ.ಎ. ಪದವಿ ಚಿತ್ರಕಲಾ ವಿದ್ಯಾಲಯಗಳ ಪ್ರಾಚಾರ್ಯರ ಸಭೆ ನಡಾವಳಿ ಕುರಿತು.

ಟಿಪ್ಪಣಿ : ಕನ್ನಡ ವಿಶ್ವವಿದ್ಯಾಲಯ, ಹಂಪಿ ದೃಶ್ಯಕಲಾ ವಿಭಾಗದಲ್ಲಿ ದಿನಾಂಕ ೨೭.೦೬.೨೦೨೩ರಂದು ಬಿ.ವಿ.ಎ. ಪದವಿ ಚಿತ್ರಕಲಾ ವಿದ್ಯಾಲಯಗಳ ೨೦೧೩-೨೪ನೇ ಸಾಲಿನಿಂದ ಯು.ಯು.ಸಿ.ಎಂ.ಎಸ್. (Unified University & College Management System) ತಂತ್ರಾಂಶವನ್ನು ಅಳವಡಿಸಿಕೊಳ್ಳುವ ಕುರಿತಂತೆ ದಿನಾಂಕ ೨೭.೦೬.೨೦೨೩ರಂದು ನಡೆದ ಚಿತ್ರಕಲಾ ವಿದ್ಯಾಲಯಗಳ ನಿರ್ವಹಣಾ ಕೇಂದ್ರದ ಬಿ.ವಿ.ಎ. ಪದವಿ ಚಿತ್ರಕಲಾ ವಿದ್ಯಾಲಯಗಳ ಪ್ರಾಚಾರ್ಯರ ಸಭೆ ನಡಾವಳಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ದಿನಾಂಕ ೨೭.೦೬.೨೦೨೩ರಂದು ನಡೆದ ಚಿತ್ರಕಲಾ ವಿದ್ಯಾಲಯಗಳ ನಿರ್ವಹಣಾ ಕೇಂದ್ರದ ಬಿ.ವಿ.ಎ. ಪದವಿ ಚಿತ್ರಕಲಾ ವಿದ್ಯಾಲಯಗಳ ಪ್ರಾಚಾರ್ಯರ ಸಭೆ ನಡಾವಳಿಗಳನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

೨೨೦.೧೪ ದಿನಾಂಕ ೧೧.೦೪.೨೦೨೩ರಂದು ಡಾ. ವೆಂಕಟೇಶ ಇಂದ್ವಾಡಿ, ಪ್ರಾಧ್ಯಾಪಕರು, ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ ಇವರು ಸೆಬಾಟಿಕಲ್ ರಜೆ ಕೋರಿ ಸಲ್ಲಿಸಿರುವ ಮನವಿ ಕುರಿತು.

ಟಿಪ್ಪಣಿ : ಕನ್ನಡ ಸಾಹಿತ್ಯ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ ಡಾ. ವೆಂಕಟೇಶ ಇಂದ್ವಾಡಿ ಇವರು **'ಬಾಲಬಸವ ಸಂಪ್ರದಾಯ ಮತ್ತು ಅವರ ಮೌಖಿಕ ಕಾವ್ಯಗಳ ವಿಶ್ಲೇಷಣೆ'** ಎಂಬ ವಿಷಯಕ್ಕೆ ಸಂಬಂಧಿಸಿದ ಯೋಜನೆಯನ್ನು ಕೈಗೊಳ್ಳಲು ಒಂದು ವರ್ಷದ ಅವಧಿಯ ಸೆಬಾಟಿಕಲ್ ರಜೆಗೆ ದಿನಾಂಕ ೧೧.೦೪.೨೦೨೩ರಂದು ಮನವಿಯನ್ನು ಸಲ್ಲಿಸಿದ್ದಾರೆ. ದಿನಾಂಕ ೧೧.೦೪.೨೦೨೩ರ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗದ ಅಧ್ಯಯನ ಮಂಡಳಿ ಸಮಿತಿ ಸಭೆ ಅನುಮೋದನೆ ಮೇರೆಗೆ ಹಾಗೂ ಯುಜಿಸಿ ನಿಯಮಾವಳಿ ೨೦೧೦ರ ಅನ್ವಯ (ದಿ ಗೆಜೆಟಿಯರ್ ಆಫ್ ಇಂಡಿಯಾ ಸೆಪ್ಟಂಬರ್ ೧೮, ೨೦೧೦- ಪಾರ್ಟ್-೩ ಸೆಕ್ಷನ್-೪ ಕಂಡಿಕೆ ೮.೩) ಹಾಗೂ ವಿಶ್ವವಿದ್ಯಾಲಯಗಳ ನಿಯಮಾವಳಿಗಳನ್ವಯ ಸೆಬಾಟಿಕಲ್ ರಜೆಯನ್ನು ಮಂಜೂರು ಮಾಡಲು ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ನಿಯಮಾನುಸಾರ ಸೆಬಾಟಿಕಲ್ ರಜೆಯನ್ನು ಮಂಜೂರು ಮಾಡಲು ಸಭೆ ತೀರ್ಮಾನಿಸಿತು.

೨೨೦.೧೫ ವಿಶ್ವವಿದ್ಯಾಲಯದ ಸಿಬ್ಬಂದಿಗಳಿಗೆ ಸಂಬಂಧಿಸಿದ ಕೆಲವೊಂದು ಗೌಪ್ಯ ಮಾಹಿತಿ ಸೋರಿಕೆಯಾಗುತ್ತಿರುವ ಕುರಿತು.

ನಿರ್ಣಯ : ವಿಶ್ವವಿದ್ಯಾಲಯದ ಸಿಬ್ಬಂದಿಗಳಿಗೆ ಸಂಬಂಧಪಟ್ಟ ಕೆಲವೊಂದು ಗೌಪ್ಯ ದಾಖಲೆ/ಮಾಹಿತಿಗಳು ಹೊರಗಡೆ ಸೋರಿಕೆಯಾಗುತ್ತಿರುವುದು ಗಮನಕ್ಕೆ ಬಂದಿದ್ದು, ಇನ್ನು ಮುಂದೆ ಹಾಗಾಗದಂತೆ ಕಟ್ಟುನಿಟ್ಟಿನ ಎಚ್ಚರಿಕೆ ವಹಿಸಲು ಸೂಚಿಸಿ, ಆಡಳಿತಾಂಗದ ವ್ಯಾಪ್ತಿಗೆ ಮಿತಿಗೊಳಿಸಿ ಸುತ್ತೋಲೆ ಹೊರಡಿಸಬೇಕೆಂದು ಸಭೆಯು ತೀರ್ಮಾನಿಸಿತು. ಈಗಾಗಲೇ ಕೆಲವು ಗೌಪ್ಯ ದಾಖಲೆಗಳು ಸೋರಿಕೆಯಾದ ಹಿನ್ನೆಲೆಯಲ್ಲಿ ಇದಕ್ಕೆ ಸಂಬಂಧಿಸಿದಂತೆ ಉಪಕುಲಸಚಿವರು (ಆಡಳಿತ) ಇವರು ಸಂಬಂಧಿಸಿದವರಿಂದ ಪೂರ್ಣ ಮಾಹಿತಿ ಪಡೆದು ಸಲ್ಲಿಸಲು ಸಭೆಯು ತೀರ್ಮಾನಿಸಿತು.

೨೨೦.೧೬ ಕನ್ನಡ ವಿಶ್ವವಿದ್ಯಾಲಯದ ಬೋಧಕೇತರ ಸಿಬ್ಬಂದಿ ವೃಂದ ಮತ್ತು ನೇಮಕಾತಿ ಪರಿಷ್ಕರಣೆ ಕುರಿತು

ನಿರ್ಣಯ : ಕನ್ನಡ ವಿಶ್ವವಿದ್ಯಾಲಯದ ಬೋಧಕೇತರ ಸಿಬ್ಬಂದಿಗಳ ವೃಂದ ಮತ್ತು ನೇಮಕಾತಿ ನಿಯಮಗಳ ಪರಿಷ್ಕರಿಸುವ ಸಂಬಂಧ ನಿಯಮಾನುಸಾರ ಸಮಿತಿಯೊಂದನ್ನು ರಚಿಸಲು ಸಭೆಯು ತೀರ್ಮಾನಿಸಿತು.

೨೨೦.೧೭ ಬೋಧಕೇತರ ಸಿಬ್ಬಂದಿಗಳ ಸೇವಾ ಜೇಷ್ಠತೆ ಪಟ್ಟಿ ಮತ್ತು ಇಲಾಖಾ ಮುಂಬಡ್ತಿ ಕುರಿತು.

ನಿರ್ಣಯ : ಕನ್ನಡ ವಿಶ್ವವಿದ್ಯಾಲಯದ ಬೋಧಕೇತರ ಸಿಬ್ಬಂದಿಗಳ ಸೇವಾ ಜೇಷ್ಠತಾ ಪಟ್ಟಿಯನ್ನು ನಿಯಮಾನುಸಾರ ಸಿದ್ಧಪಡಿಸಿ ಇಲಾಖಾ ಮುಂಬಡ್ತಿಗಾಗಿ ಸಮಿತಿಯೊಂದನ್ನು ರಚಿಸಲು ಸಭೆಯು ತೀರ್ಮಾನಿಸಿತು.

೨೨೦.೧೮ ಶ್ರೀ ಎ. ಕಾಶಿವಿಶ್ವನಾಥ, ನಿವೃತ್ತ ಸಹಾಯಕ ನಿರ್ದೇಶಕರು ಇವರ ಕೋರಿಕೆಯ ಹಿನ್ನೆಲೆಯಲ್ಲಿ ನಿವೃತ್ತಿ ಉಪಲಬ್ಧಿಗಳ ಆರ್ಥಿಕ ಸೌಲಭ್ಯಗಳನ್ನು ಪರಿಷ್ಕರಿಸುವ ಕುರಿತು.

ನಿರ್ಣಯ : ಶ್ರೀ ಎ. ಕಾಶಿವಿಶ್ವನಾಥ, ನಿವೃತ್ತ ಸಹಾಯಕ ನಿರ್ದೇಶಕರು ಇವರ ನಿವೃತ್ತಿ ಉಪಲಬ್ಧಿಗಳ ಲೆಕ್ಕಾಚಾರದ ಪರಿಷ್ಕೃತ ಆದೇಶವನ್ನು ಸಿದ್ಧಪಡಿಸಿ ಆರ್ಥಿಕ ಸೌಲಭ್ಯವನ್ನು ವಿಸ್ತರಿಸಲು ಹಾಗೂ ಈ ಆರ್ಥಿಕ ಸೌಲಭ್ಯಗಳಿಗೆ ಲೆಕ್ಕ ಪರಿಶೋಧನೆಯಲ್ಲಿ ಆಕ್ಷೇಪಣೆ/ವಸೂಲಾತಿ ಸೂಚಿಸಿದಲ್ಲಿ ಅಂತಹ ಮೊತ್ತವನ್ನು ಮಾಸಿಕ ಪಿಂಚಣಿಯಲ್ಲಿ ಕಡಿತಗೊಳಿಸಿ ಮರುವಳಿ ಮಾಡಿಕೊಳ್ಳಲು ಅಥವಾ ಹಿಂದಿರುಗಿಸಲು ಒಪ್ಪಿರುತ್ತೇನೆ ಎಂದು ಸದರಿ ಸಿಬ್ಬಂದಿಯವರಿಂದ ರೂ.೨೦೦/-ಗಳ ಬಾಂಡ್ ಪೇಪರ್‌ನಲ್ಲಿ ಮುಚ್ಚಳಿಕೆಯನ್ನು ಪಡೆದು ಮುಂದಿನ ಕ್ರಮವಹಿಸಲು ಸಭೆಯು ತೀರ್ಮಾನಿಸಿತು.



21/7/23

೨೨೦.೧೯ ಶ್ರೀ ಕೆ.ಎಂ. ಕುಬೇರಪ್ಪ, ಕಿರಿಯ ಅಭಿಯಂತರರು ಅವರ ಪ್ರತಿನಿಯೋಜನೆ ಕುರಿತು.

ನಿರ್ಣಯ : ಶ್ರೀ ಕೆ.ಎಂ. ಕುಬೇರಪ್ಪ ಇವರನ್ನು ಕುಲಸಚಿವರ ಆದೇಶ ಸಂಖ್ಯೆ:ಕವಿಹಂ:ಕುಸ:ಮುಂ:೨೦೨೧-೨೨ ದಿನಾಂಕ ೨೭.೧೧.೨೦೨೧ರ ಆದೇಶದಂತೆ ಮೈಸೂರಿನ ಪುರಾತತ್ವ ಸಂಗ್ರಹಾಲಯಗಳ ಮತ್ತು ಪರಂಪರೆ ಇಲಾಖೆಗೆ ದಿನಾಂಕ ೮.೬.೨೦೨೧ ರಿಂದ ಅನ್ವಯವಾಗುವಂತೆ ದಿನಾಂಕ ೧೭.೦೬.೨೦೨೩ರವರೆಗೆ ಎರಡು ವರ್ಷಗಳ ಮಟ್ಟಿಗೆ ಪ್ರತಿನಿಯೋಜನೆಯನ್ನು ಮುಂದುವರೆಸಲಾಗಿತ್ತು. ಸದರಿಯವರ ಪ್ರತಿನಿಯೋಜನೆ ಅವಧಿಯು ದಿನಾಂಕ ೧೭.೦೬.೨೦೨೩ರಂದು ಪೂರ್ಣಗೊಂಡಿದೆ. ಅವಧಿ ಪೂರ್ಣಗೊಂಡಿದ್ದರೂ ಶ್ರೀ ಕೆ.ಎಂ. ಕುಬೇರಪ್ಪ ಇವರು ಮೇಲ್ಕಾಣಿಸಿದ ಇಲಾಖೆಯಿಂದ ಬಿಡುಗಡೆಗೊಂಡು ಈವರೆಗೆ ಕನ್ನಡ ವಿಶ್ವವಿಶ್ವವಿದ್ಯಾಲಯದಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುವುದಿಲ್ಲ. ಈ ಸಂಬಂಧ ಸದರಿಯವರಿಂದ ಹಾಗೂ ಇಲಾಖೆಯಿಂದ ವಿವರಣೆಯನ್ನು ಪಡೆಯಲು ಸಭೆಯು ತೀರ್ಮಾನಿಸಿತು.

೨೨೦.೨೦ ಸಿಬ್ಬಂದಿಗಳ ವೇತನ ನಿಗದೀಕರಣ, ವಾರ್ಷಿಕ ವೇತನ ಬಡ್ತಿ, ನಿವೃತ್ತಿ ವೇತನ, ಕುಟುಂಬ ಪಿಂಚಣಿ ಹಾಗೂ ಇತರೆ ಆರ್ಥಿಕ ಸೌಲಭ್ಯಗಳ ಆದೇಶಗಳ ಸಿದ್ಧತೆ ಕಾರ್ಯಗಳ ನಿರ್ವಹಣೆ ಕುರಿತು.

ನಿರ್ಣಯ : ಕನ್ನಡ ವಿಶ್ವವಿದ್ಯಾಲಯದಲ್ಲಿ ಈವರೆಗೆ ಹಣಕಾಸು ವಿಭಾಗದಿಂದ ನಿರ್ವಹಿಸಲಾಗುತ್ತಿದ್ದ ಸಿಬ್ಬಂದಿಗಳ ವೇತನ ನಿಗದೀಕರಣ, ವಾರ್ಷಿಕ ವೇತನ ಬಡ್ತಿ, ನಿವೃತ್ತಿ ವೇತನ, ಕುಟುಂಬ ಪಿಂಚಣಿ ಹಾಗೂ ಇತರೆ ಆರ್ಥಿಕ ಸೌಲಭ್ಯಗಳ ಆದೇಶಗಳ ಸಿದ್ಧತೆ ಕಾರ್ಯಗಳ ನಿರ್ವಹಣೆ ಕುರಿತು ಸಭೆಯು ಚರ್ಚಿಸಿ ಇನ್ನು ಮುಂದೆ ಹಣಕಾಸು ವಿಭಾಗದ ಬದಲಾಗಿ ಆಡಳಿತಾಂಗ/ ಸಿಬ್ಬಂದಿ ಶಾಖೆ (ಎಸ್ಟಾಬ್ಲೆಷ್‌ಮೆಂಟ್) ವತಿಯಿಂದ ಸದರಿ ಕಾರ್ಯಗಳನ್ನು ನಿರ್ವಹಿಸಲು ಸಭೆಯು ತೀರ್ಮಾನಿಸಿತು.

೨೨೦.೨೧ ತಾಂತ್ರಿಕ ವಿಭಾಗದಲ್ಲಿ ಪ್ರತ್ಯೇಕವಾಗಿ ನಿರ್ವಹಿಸಲಾಗಿರುವ ಸಿವಿಲ್ ಮತ್ತು ವಿದ್ಯುತ್ ಶಾಖೆಯನ್ನು ವಿಲೀನಗೊಳಿಸುವ ಬಗ್ಗೆ.

ನಿರ್ಣಯ : ಈ ಕುರಿತು ಸಭೆಯು ಚರ್ಚಿಸಿ ತಾಂತ್ರಿಕ ವಿಭಾಗದಲ್ಲಿ ಪ್ರತ್ಯೇಕವಾಗಿ ನಿರ್ವಹಿಸಲಾಗುತ್ತಿರುವ ಸಿವಿಲ್ ಮತ್ತು ವಿದ್ಯುತ್ ಶಾಖೆಯನ್ನು ವಿಲೀನಗೊಳಿಸಿ ಒಂದೇ ವಿಭಾಗವಾಗಿ ಕಾರ್ಯನಿರ್ವಹಿಸಲು ಸಭೆಯು ತೀರ್ಮಾನಿಸಿತು.

೨೨೦.೨೨ ವಿವಿಧ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಉದ್ದೇಶಗಳಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಆಗಮಿಸುವ ವಿದ್ವಾಂಸರು ಮತ್ತು ಗಣ್ಯರಿಗೆ ಅದೇ ರೀತಿ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಉದ್ದೇಶಗಳಿಗಾಗಿ ಬೇರೆ ಸ್ಥಳಗಳಿಗೆ ಪ್ರಯಾಣಿಸುವ ವಿಶ್ವವಿದ್ಯಾಲಯದ ಪ್ರಾಧ್ಯಾಪಕರು/ಅಧಿಕಾರಿಗಳಿಗೆ ನೀಡಲಾಗುವ ಪ್ರಯಾಣ ಭತ್ಯೆ ದರಗಳನ್ನು ಪರಿಷ್ಕರಿಸುವ ಕುರಿತು.

ನಿರ್ಣಯ : ಸದರಿ ವಿಷಯವನ್ನು ಸಭೆಯು ಪರಿಶೀಲಿಸಿ ತತ್ಸಂಬಂಧವಾಗಿ ಸಮಿತಿಯೊಂದನ್ನು ರಚಿಸಿ ಸೂಕ್ತ ಕ್ರಮ ಕೈಗೊಳ್ಳಲು ತೀರ್ಮಾನಿಸಿತು.

೨೨೦.೨೩ ಕನ್ನಡ ವಿಶ್ವವಿದ್ಯಾಲಯದ ಅಧ್ಯಯನಾಂಗದ ವತಿಯಿಂದ ನಡೆಸಲಾಗುತ್ತಿರುವ ವಿವಿಧ ಕೋರ್ಸ್‌ಗಳಿಗೆ ಪರಿಷ್ಕೃತ ಶುಲ್ಕವನ್ನು ಜಾರಿಗೊಳಿಸುವ ಕುರಿತು.

ನಿರ್ಣಯ : ಈ ಕುರಿತು ರಚಿಸಲಾಗಿದ್ದ ಸಮಿತಿಯು ಶಿಫಾರಸ್ಸು ಮಾಡಿರುವ ಪರಿಷ್ಕೃತ ಶುಲ್ಕವನ್ನು ೨೦೨೩-೨೪ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ವಿವಿಧ ಕೋರ್ಸ್‌ಗಳಿಗೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ಅನ್ವಯವಾಗುವಂತೆ ಜಾರಿಗೊಳಿಸಲು ಸಭೆಯು ತೀರ್ಮಾನಿಸಿತು.

೨೨೦.೨೪ ಬೋಧಕ ಮತ್ತು ಆಡಳಿತ ಸಿಬ್ಬಂದಿಗಳ ಸೇವಾ ಪುಸ್ತಕಗಳ ನಿರ್ವಹಣೆ ಕುರಿತು.

ನಿರ್ಣಯ : ಇದುವರೆಗೆ ಬೋಧಕ ಸಿಬ್ಬಂದಿಗಳ ಸೇವಾ ಪುಸ್ತಕಗಳನ್ನು ಕುಲಸಚಿವರೂ ಆಡಳಿತ ಸಿಬ್ಬಂದಿಗಳ ಸೇವಾ ಪುಸ್ತಕಗಳನ್ನು ಉಪಕುಲಸಚಿವರೂ ನಿರ್ವಹಿಸುತ್ತಿದ್ದು, ಇನ್ನು ಮುಂದೆ ಬೋಧಕ ಮತ್ತು ಆಡಳಿತ ಸಿಬ್ಬಂದಿಗಳ ಸೇವಾ ಪುಸ್ತಕಗಳನ್ನು ಕುಲಸಚಿವರೇ ನಿರ್ವಹಿಸಲು ಸಭೆ ತೀರ್ಮಾನಿಸಿತು.

೨೨೦.೨೫ ವಿಶ್ವವಿದ್ಯಾಲಯದಲ್ಲಿ ಪ್ರಥಮದರ್ಜೆ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಎಸ್. ರಾಮಾನಾಯ್ಕ ಇವರು ನಿಯಮಾನುಸಾರ ಸಕ್ಷಮ ಪ್ರಾಧಿಕಾರದ ಅನುಮತಿಯನ್ನು ಪಡೆಯದೆ ಗೌರವಾನ್ವಿತ ರಾಜ್ಯಪಾಲರಿಗೆ ಮತ್ತು ಸರ್ಕಾರಕ್ಕೆ ಪತ್ರಗಳನ್ನು ಬರೆದಿರುವ ಕುರಿತು.

ನಿರ್ಣಯ : ಸದರಿ ವಿಷಯದ ಕುರಿತು ಚರ್ಚಿಸಿದ ಸಮಿತಿಯು ಸಕ್ಷಮ ಪ್ರಾಧಿಕಾರದ ಅನುಮತಿಯನ್ನು ಪಡೆಯದೆ ಗೌರವಾನ್ವಿತ ರಾಜ್ಯಪಾಲರಿಗೆ ಮತ್ತು ಸರ್ಕಾರಕ್ಕೆ ಪತ್ರಗಳನ್ನು ಬರೆದಿರುವ ಬಗೆಗೆ ಸದರಿಯವರಿಂದ ಸೂಕ್ತ ವಿವರಣೆ ಕೇಳಿ ನೋಟೀಸ್ ಜಾರಿಗೊಳಿಸಲು ಸಭೆಯು ತೀರ್ಮಾನಿಸಿತು.

ಕುಲಸಚಿವರ ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಕುಲಸಚಿವರು
ಪದನಿಮಿತ್ತ ಕಾರ್ಯದರ್ಶಿ

ಕುಲಪತಿಗಳು 21/7/23
ಅಧ್ಯಕ್ಷರು